# ಶ್ರೀ ಸುತ್ತೂರು ಮಠ, ಮೈಸೂರು ಶಾಖೆ

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 213

**17 ಜೂನ್ 2019 * ಸೋಮವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ



ಗಾಯನ
**ವಿದುಷಿ ಭಾರ್ಗವಿ ವೆಂಕಟರಾಮ್**



ವಯೊಲಿನ್
**ಮಾಸ್ಟರ್ ಸುಮಂತ್ ಮಂಜುನಾಥ್**



ಮೃದಂಗ
**ಮಾಸ್ಟರ್ ಅಕ್ಷಯ್ ಆನಂದ್**

**ವಿದುಷಿ ಭಾರ್ಗವಿ ವೆಂಕಟರಾಂ**ರವರು ಹಿರಿಯ ಕಲಾವಿದರಾದ ವಿದುಷಿ ತ್ರಿವೇಣಿ ಸರಳಾಯರವರ ಮಗಳು. ತಮ್ಮ ಎರಡನೆಯ ವರ್ಷದಲ್ಲಿಯೇ ರಾಗಗಳನ್ನು ಗುರುತಿಸುವ ಸ್ವರಜ್ಞಾನವುಳ್ಳ ಅಪೂರ್ವ ಮೊದಲಿಗೆ ಪಾಠಗಳನ್ನು ತಂದೆತಾಯಿಯರು ಮತ್ತು ಚಿಕ್ಕಮ್ಮ ವಿದುಷಿ ಕವಿತಾ ಸರಳಾಯರವರ ಬಳಿ ಸಂಗೀತ ಕಲಿತರು. ಪ್ರಸ್ತುತ ಚೆನ್ನೈನ ಖ್ಯಾತ ಸಂಗೀತಗಾರರಾದ ವಿದ್ವಾನ್ ಟಿ.ಎಂ. ಕೃಷ್ಣನ್‌ರವರ ಬಳಿ ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ. ಆಕಾಶವಾಣಿಯ ರಾಷ್ಟ್ರಮಟ್ಟದ ಸಂಗೀತ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದಿದ್ದಾರೆ. ರಾಜ್ಯ ಸರ್ಕಾರದ ಕಿಶೋರ ಪ್ರತಿಭೆ ಪುರಸ್ಕಾರ, ಐಟಿಸಿ ಸಂಗೀತ ಸಂಶೋಧನಾ ಸಂಸ್ಥೆಯ ಪುರಸ್ಕಾರಗಳೂ ಸೇರಿದಂತೆ ಹತ್ತಕ್ಕೂ ಮಿಕ್ಕ ಪ್ರತಿಷ್ಠಿತ ಪ್ರಶಸ್ತಿ ಪಡೆದಿದ್ದಾರೆ. ಬೆಂಗಳೂರು, ಮದರಾಸು, ಮುಂಬಯಿ ಮೊದಲಾದ ಕಡೆಗಳಲ್ಲಿ ಸಂಗೀತ ಕಚೇರಿಗಳನ್ನು ನೀಡಿ ರಸಿಕರನ್ನೂ, ವಿಮರ್ಶಕರನ್ನೂ ರಂಜಿಸಿದ್ದಾರೆ. ಭಾವರಸರಂಜಿತವಾದ ಆಕರ್ಷಕ ಧ್ವನಿ, ಕಲ್ಪನಾ ಚಾತುರ್ಯ ಮತ್ತು ಮನೋಧರ್ಮಗಳ ಹಿತಮಿತವಾದ ಸಮ್ಮಿಲನ ಇವರ ಸಂಗೀತದ ವೈಶಿಷ್ಟ್ಯ. ಅಖಿಲ ಭಾರತ ಆಕಾಶವಾಣಿಯಲ್ಲಿ "ಬಿ" ಶ್ರೇಣಿ ಕಲಾವಿದರು.

**ಮಾಸ್ಟರ್ ಸುಮಂತ್ ಮಂಜುನಾಥ್** ಅಂತಾರಾಷ್ಟ್ರೀಯ ಖ್ಯಾತಿಯ ಕಲಾವಿದ ಡಾ. ಮೈಸೂರು ಮಂಜುನಾಥ್‌ರವರ ಪುತ್ರರು. 8ನೆಯ ವರ್ಷದಲ್ಲಿಯೇ ಸಾರ್ವಜನಿಕ ಕಚೇರಿ ನೀಡಿದ ಬಾಲಪ್ರತಿಭೆ. ತಂದೆಯೂ ಸೇರಿದಂತೆ ಮನೆಯ ಎಲ್ಲ ಹಿರಿಯರ ಮಾರ್ಗದರ್ಶನದಲ್ಲಿ ರೂಪುಗೊಂಡ ಅಪ್ಪಟ ಕಲಾವಿದರು. ಭಾರತ ಗಣರಾಜ್ಯೋತ್ಸವದ ಅಂಗವಾಗಿ, ಇರಾನ್ ದೇಶದಲ್ಲಿ ನಡೆದ ಕಾರ್ಯಕ್ರಮದಲ್ಲಿ ಇವರು ತಂದೆಯವರೊಡನೆ ಭಾಗವಹಿಸಿದ್ದರು. ಮೈಸೂರು, ಬೆಂಗಳೂರು, ಚೆನ್ನೈ, ತ್ರಿವೇಂಡ್ರಂಗಳಲ್ಲದೆ ದುಬೈ, ಅಬುಧಾಬಿಯಲ್ಲಿ ಸಂಗೀತಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿದ್ದಾರೆ. ವಿದ್ಯೆಯಷ್ಟೇ ವಿನಯವನ್ನೂ ಮೈಗೂಡಿಸಿಕೊಂಡಿರುವ ಅಪರೂಪದ ಅಭಿಜಾತ ಪ್ರತಿಭಾವಂತರು.

**ಮಾಸ್ಟರ್ ಅಕ್ಷಯ್ ಆನಂದ್** ಹಿರಿಯ ಕಲಾವಿದ ವಿದ್ವಾನ್ ಕೆ.ಎಸ್. ಕಾಳಿದಾಸ್‌ರವರ ಶಿಷ್ಯರು. ಸಂಗೀತದ ಕೌಟುಂಬಿಕ ಹಿನ್ನೆಲೆಯಿಂದ ಬಂದವರು. ಸುಮಾರು 250 ಜನ ಹಿರಿಯ ಸಂಗೀತಗಾರರಿಗೆ ಮೃದಂಗ ಸಹಕಾರ ನೀಡಿದ್ದಾರೆ. ಸ್ಪಿರಿಟ್ ಆಫ್ ಯೂತ್ ಫೆಸ್ಟಿವಲ್, ಎಚ್‌ಸಿಎಲ್ ಕನ್‌ಸರ್ಟ್ ಸೀರೀಸ್ ಮುಂತಾದ ಸ್ಪರ್ಧೆಗಳಲ್ಲಿ ಜಯಶೀಲರಾಗಿದ್ದಾರೆ. ಆಕಾಶವಾಣಿ "ಬಿ" ಶ್ರೇಣಿ ಕಲಾವಿದರು; ಟಿವಿ ವಾಹಿನಿಗಳಲ್ಲೂ ಕಾರ್ಯಕ್ರಮ ನೀಡಿರುತ್ತಾರೆ.

## ಬೆಳದಿಂಗಳ ಸಂಗೀತ 214

**16 ಜುಲೈ 2019**

ಗಾಯನ
**ಕುಮಾರಿ ಸುನೀತಾ ಹಿರೇಮಠ್**

ಹಾರ್ಮೋನಿಯಂ
**ಪಂಡಿತ್ ವೀರಭದ್ರಯ್ಯ ಹಿರೇಮಠ್**

ತಬಲ
**ಪಂಡಿತ್ ರಮೇಶ್ ಧನ್ನೂರ್**

ಫೋನ್: 0821-2548220, 2548221 * ಫ್ಯಾಕ್ಸ್: 0821-2548219